# ಹರಿ ನಿನ್ನೊಲುಮೆಯು ಆಗುವತನಕ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi.
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
4. **Note:** The lyrics mentioned without highlights are as per Ref. 1. The wordings given in yellow highlights are as per Ref. 2. The wordings in Ref. 3 almost matches with Ref. 2.
5. **Note:** The singer has mostly followed the wordings in Ref. 2.
6. **Note:** The Ankita is different in both versions. We have considered book in Ref.1 as standard and taken that Ankita for listing.

| | |
|---|---|
| ರಾಗ: ರೇಗುಪ್ತಿ ತಾಳ: ಆದಿ | ರಾಗ: ಶಂಕರಾಭರಣ ತಾಳ: ಆದಿ |
| | |
| ಹರಿ ನಿನ್ನೊಲುಮೆಯು ಆಗುವ ತನಕ | ಹರಿ ನಿನ್ನೊಲುಮೆಯು ಆಗುವ ತನಕ |
| ಅರಿತು ಸುಮ್ಮನಿರುವುದೆ ಲೇಸು ‖ ಪ ‖ | ಅರಿತು ಸುಮ್ಮನಿರುವುದು ಲೇಸು |
| | |
| ಮರಳಿ ಮರಳಿ ತಾ ಪಡೆಯದ ಭಾಗ್ಯಕೆ | ಮರಳಿ ಮರಳಿ ತಾ ಪಡೆಯದ ಭಾಗ್ಯಕೆ |
| ಮರುಗಿದರೆ ತನಗಾದೀತೆ ‖ ಅಪ ‖ | ಹೊರ ಹೊರಳುತ ಕನಲಲು ಬಂದೀತೆ |
| | |
| ದೂರು ಬರುವ ನಂಬಿಕೆಯನು ಕೊಟ್ಟರೆ | ದೂರು ಬರುವ ತೆರ ನಂಬಿಕೆ ಕೊಟ್ಟರೆ |
| ದುರ್ಜನ ಬರುವುದು ತಪ್ಪೀತೆ | ದುರ್ಜನ ಬರುವುದು ತಪ್ಪೀತೆ |
| ದೂರ ನಿಂತು ಮೊರೆಯಿಟ್ಟು ಕೂಗಿದರೆ | ದೂರದಿ ನಿಂತು ಮೊರೆಯಿಟ್ಟು ಕೂಗಲು |
| ಚೋರರಿಗೆ ದಯ ಪುಟ್ಟೀತೆ | ಚೋರಗೆ ದಯವು ಪುಟ್ಟೀತೆ |
| ಜಾರನಾರಿ ತಾ ಪತಿವ್ರತೆ ಎನ್ನಲು | ಬಾರಿ ಬಾರಿಗೆ ಪಾತಿವ್ರತ್ಯವ ಭೋದಿಸೆ |
| ಜಾಣರಿಗೆ ನಿಜ ತೋರೀತೆ | ಜಾರೆಗದರ ನಿಜ ಸೊಗಸೀತೆ |
| ಊರ ಬಿಟ್ಟು ಬೇರೂರಿಗೆ ಹೋದರೆ | ಊರು ಬಿಟ್ಟು ಬೇರೂರಿಗೆ ಹೋದರೆ |
| ಪ್ರಾರಬ್ಧವು ಬೇರಾದೀತೆ ‖ 1 ‖ | ಪ್ರಾರಬ್ಧವು ಬೇರಾದೀತೆ |
| | |
| ಪಾಟುಪಡುವುದು ಪಣೆಯಲ್ಲಿರಲು | ಪಂಚೆಮಂಚ ತಿರುವಿಟ್ಟರೆ ಫಣೆಯೊಳು |
| ಪಟ್ಟೆಮಂಚ ತನಗಾದೀತೆ | ಮೆಟ್ಟಿದ ಭ್ರಮಣೆಯು ಬಿಟ್ಟೀತೆ |
| ಹೊಟ್ಟೆಯಲ್ಲಿ ಸುತರಿಲ್ಲೆಂದು ಹೊರಳಲು | ಹೊಟ್ಟೆಲಿ ಸುತರಿಲ್ಲೆಂದೊದರಲು |
| ಹುಟ್ಟು ಬಂಜೆಗೆ ಮಕ್ಕಳಾದೀತೆ | ಹುಟ್ಟು ಬಂಜೆಗೆ ಫಲವಾದೀತೆ |

| | |
|---|---|
| ಬೆಟ್ಟದ ನವಿಲಿಗೆ ಕಣ್ಣೀರು ಬಂದರೆ | ಬೆಟ್ಟದ ನವಿಲಿಗೆ ಕಣ್ಣೀರು ಬಂದರೆ |
| ಬೇಟೆಗಾರಗೆ ದಯ ಪುಟ್ಟೀತೆ | ಬೇಟೆಗಾರಗೆ ದಯ ಪುಟ್ಟೀತೆ |
| ಕೆಟ್ಟ ಹಾವು ತಾ ಕಚ್ಚಿದ ವಿಷವದು | ಕೆಟ್ಟ ಹಾವು ಕಚ್ಚಿದ ಗಾಯಕೆ |
| ಬಟ್ಟೆಯಲೊರಸಲು ಹೋದೀತೆ    \|\| 2 \|\| | ಹಳೆ ಬಟ್ಟೆಯೊಳೊರಸೆ ವಿಷ ಹೋದೀತೆ |
| | |
| ಧನಿಕನ ಕಂಡು ಪಾಡಿ ಪೊಗಳಿದರೆ | ಧನಿಕರ ಕಂಡು ದೈನ್ಯವ ಪಟ್ಟರೆ |
| ದಾರಿದ್ರ್ಯವು ತಾ ಹಿಂಗೀತೆ | ಕಡು ದಾರಿದ್ರ್ಯವು ಹಿಂಗೀತೆ |
| ದಿನ ದಿನ ನೊಸಲೊಳು ನಾಮವನಿಟ್ಟರೆ | ದಿನ ದಿನ ನೊಸಲೊಳು ತಿರುಮಣಿಯಿಟ್ಟರೆ |
| ದೇವರಿಗೆ ತೃಪ್ತಿಯಾದೀತೆ | ದೇವರ ದಯವು ಪುಟ್ಟೀತೆ |
| ಎಣಿಸಿಕೊಂಡು ಎಳ್ ಹಂಜಿಯ ನೂತರೆ | ಎಣಿಸಿಕೊಂಡ್ ಎಳ್ ಹಂಜಿಯ ನೂತರೆ |
| ಅಣೆಯದ ಸಾಲವು ತೀರೀತೆ | ಮಣಿಯದ ಸಾಲವು ತೀರೀತೆ |
| ಅನುದಿನದಲಿ ಶ್ರೀ ಪುರಂದರ ವಿಠಲನ | ಅನುದಿನ ನಮ್ಮ ಪುರಂದರ ವಿಠಲನ |
| ನೆನೆಯದಿದ್ದರೆ ಭವ ಹಿಂಗೀತೆ    \|\| 3 \|\| | ನೆನೆದಲ್ಲದೆ ಭವ ಹಿಂಗೀತೆ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ದೂರು ಬರುವ .....ತಪ್ಪೀತೆ** = ಅಪವಾದ ಬರುವಂತೆ ಇನ್ನೊಬ್ಬರ ಜತೆಯಲ್ಲಿ ವಿಶ್ವಾಸದಿಂದ ನಡೆದುಕೊಂಡರೆ, ಅದರ ಸಂಗಡ ದುಷ್ಟತನವು ಕಟ್ಟಿಟ್ಟ ಮಾತು.

**ಉರಬಿಟ್ಟು .... ಬೇರಾದೀತೆ** = ಪ್ರಾರಬ್ಧವು ಜನ್ಮ ಜನ್ಮಾಂತರದಿಂದ ಬಂದು ಅನುಭವಿಸಲೇಬೇಕಾದುದರಿಂದ ಅದು ಎಲ್ಲಿ ಹೋದರು ತಪ್ಪದು.

**ಪಾಟಪಡು** = ಕಷ್ಟಪಡು

**ಪಟ್ಟಮಂಚ** = ಸಿಂಹಾಸನ

**ಅಣೆ** = ಸಾಧ್ಯವಾಗು

**ನೊಸಲು** = ಹಣೆ

**ಕನಲು** = ಕೋಪಗೊಳ್ಳು, ಸಿಟ್ಟಾಗು

**ಜಾರ** = ವ್ಯಭಿಚಾರಿ, ಪರಸ್ತ್ರೀ ಲೋಲುಪ

**Classification:** Keerthane
**Ankita:** sri purandara vittala
**Location:** NA
**Category:** krishna stuti.

**Sub-Category:** Krishna, bhava, uraga, ooru, daya, olume, srimanta, Bhagya, jana, kalla, patni, karma, udara, maga, makkalu, navilu, parvata, visha, badava,

**Pravachana:** NA

**Explanation:** NA